MVC No.50/2023
PW-1

**ದಿನಾಂಕಃ 10-12-2024.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು: 2 ನೇ ಎದುರುದಾರ ಪರ ಶ್ರೀ TGK ವಕೀಲರಿಂದಃ**

ಮೃತ ಉಮಾ @ ಉಮಾದೇವಿ ನನ್ನ ಮಗಳಾಗಿರುತ್ತಾಳೆ. ಈಗ 5 ವರ್ಷದ ಹಿಂದೆ ಸದರಿ ನನ್ನ ಮಗಳು ಗೊಬ್ಬೂರದಿಂದ ಯಾದಗಿರಿಗೆ ಶಿಕ್ಷಕರ ಪರೀಕ್ಷೆ ಬರೆಯಲು ಒಂದು ಮೋಟಾರ ಸೈಕಲ ಮೇಲೆ ಹೋಗುತ್ತಿದ್ದಳು. ಮೋಟಾರ ಸೈಕಲನ್ನು ನಮ ಸಂಬಂಧಿ ಜಿಂದಪ್ಪ ಎನ್ನುವವರು ಚಲಾಯಿಸುತ್ತಿದ್ದರು. ಅವರು ಹಾಗೆ ಹೋಗುವಾಗ ವಡಗೇರಾ ಹತ್ತಿರ ಅಪಘಾತ ಆಗಿತ್ತು. ಸದರಿ ಜಿಂದಪ್ಪನ ಬವಿಳಿ ಮೋಟಾರ ಸೈಕಲ ಚಲಾಯಿಸಲು DL ಇತ್ತೋ ಅಥವಾ ಇಲ್ಲವೊ ಎಂದು ನನಗೇ ಗೊತ್ತಿಲ್ಲ. ಸದರಿ ಜಿಂದಪ್ಪ ಇತನ ಬಳಿ ಮೋಟಾರ ಸೈಕಲ ಚಲಾಯಿಸಲು Dl ಇರಲಾರದ ಕಾರಣ ಮೋಟಾರ ಸೈಕಲ ಮಾಲಕ ಪ್ರಕಾಶ್ ಇತನ ಮೆಲೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

2. ಅಪಘಾತವಾದ ನಂತರ ನನ್ನ ಮಗಳನ್ನು ಯಾದಗಿರಿಯ ಸರ್ಕಾರಿ ಆಸ್ಪತ್ರೆಗೆ, ಅಲ್ಲಿಂದ ರಿಮ್ಸ್ ಆಸ್ಪತ್ರೆ ರಾಯಚೂರು ಮತ್ತ ಅಲ್ಲಿಂದ ನಿಮಾನ್ಸ್ ಆಸ್ಪತೆಗೆ ಬೆಂಗಳೂರಿಗೆ ತೆಗೆದುದೂಂಡು ಹೊಗೇಲಾಗಿತ್ತು. ಅಲ್ಲಿ ನನ್ನ ಮಗಳು ಮರಣ ಹೊಂದಿರುತ್ತಾಳೆ. ಅಪಘಾತವಾದ ಬಳಿಕ ಅಂದಾಜು 20 ದಿನಗಳ ನಂತರ ದೂರು ದಾಖಲಿಸಲಾಗಿದೆ. ಅಪಘಾತವಾದ ತಕ್ಷಣದಲ್ಲಿ ದೂರು ದಾಖಲಿಸಲು ನಮಗೆ ಗೊತ್ತಾಗಲಿಲ್ಲ ಮತ್ತು ನಾವು ನಮ್ಮ ಮಗಳನ್ನು ಉಳಿಸಿಕೊಳ್ಳುವ ಸಲುವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋದ ಕಾರಣ ದೂರು ದಾಖಲಿಸಲು ವಿಳಂಬವಾಗಿರುತ್ತದೆ. ಈ ಬಗ್ಗೆ ನಾನು ದೂರಿನಲ್ಲಿ ಹೇಳಿಲಾಗಿದಯೋ ಅಥವಾ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ನನ್ನ ಮಗಳು ರಸ್ತೆ ಅಪಘಾತದಲ್ಲಿ ಗಾಯಗೊಂಡು ಮರಣ ಹೊಂದಿರುತ್ತಾಳೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪೊಲಿಸರೊಂದಿಗೆ ಶಾಮಿಲಾಗಿ ಮೋಟಾರ ಸೈಕಲ ನಂಬರ KA-36-ES-0309 ಈ ವಾಹನ ಅಪಘಾತದಲ್ಲಿ ಒಳಗೊಂಡಿತ್ತು ಎಂದು ಹೇಳಿ ಸುಳ್ಳು ಸೇರಿಸಿರುತ್ತೇವೆ ಎಂದೆರ ಸರಿಯಲ್ಲ. ನನ್ನ ಮಗಳು ಬೇರೆ ಎಲ್ಲೋ ಬಿದ್ದು ಗಾಯ ಮಾಡಿಕೊಂಡಿದ್ದರಿಂದ ಪರಿಹಾರಧನ ಪಡೆದುಕೂಳ್ಳಲು ಸದರಿ

ಮೇಟಾರ ಸೈಕಲ ಮೇಲಿಂದ ಬಿದ್ದು ಗಾಯವಾಗಿರುತ್ತದೆ ಎಂದು ಹೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೋಟಾರ ಸೈಕಲ ಮಾಲಿಕ ವಿಮೆ ಪಾಲಿಸಿ ಮತ್ತು ಇತರ ದಾಖಲೆಗಳನ್ನು ವಿಮೆ ಕಂಪನಿಯವರಿಗೆ ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವು ಮೋಟಾರ ಸೈಕಲ ಸವಾರನ ಬಳಿ DL ಇಲ್ಲದೇ ಚಲಾಯಿಸಿದ್ದರಿಂದ ಆಗಿರುವ ಕಾರಣ ವಿಮೆ ಕಂಪನಿಯರು ಪರಿಹಾರ ನೀಡುವ ಜವಾಬ್ದಾರಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಖಾಸಗಿ ಶಾಲೆಯಲ್ಲಿ ಶಿಕ್ಷಕಿ ಎಂದು ಕೆಲಸ ಮಾಡುತ್ತಿದ್ದಳು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಕಲಾಗಿದಯೋ ಅಥವಾ ಇಲ್ಲವೂ ಎಂದು ನನಗೆ ಗೊತ್ತಿಲ್ಲ.

3. ಅಪಘಾತದ ಕಾಲಕ್ಕೆ ನನ್ನ ಮಗಳ ವಯಸ್ಸು 20 ವರ್ಷ ಇದ್ದಿತ್ತು ಎಂದು ಹೇಳಿ ಹಾಗೂ ನನ್ನ ಮಗಳು ಖಾಸಗಿ ಶಿಕ್ಷಕಿಯಾಗಿ ಕೆಲಸ ಮಾಡಿ ತಿಂಗಳಿಗೆ ರೂ.20,000/-ಆದಾಯ ಗಳಿಸುತಿದ್ದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.40,000,00/- ಪರಿಹಾರ ಕೇಳಿರುವುದಕ್ಕೆ ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲಃ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.